

ಕಾಶೀ ಕ್ಷೇತ್ರದಲ್ಲಿ ಒಂದು ದಿನ ಆದಿ ಶಂಕರಾಚಾರ್ಯರು ತಮ್ಮ ಶಿಷ್ಯರೊಡನೆ ಗಂಗೆಯಲ್ಲಿ ಸ್ನಾನ ಮಾಡಿ ಬರುತ್ತಿದ್ದಾಗ ಚಂಡಾಲನೊಬ್ಬ ಅವರಿಗೆ ಎದುರಾದ. ಶಂಕರಾಚಾರ್ಯರು ಅಸಹ್ಯಪಟ್ಟುಕೊಂಡು, ಕೋಪದಿಂದ
ಹೇ ಚಂಡಾಲ, ದೂರ ಹೋಗು, ದಾರಿ ಬಿಡು,
ಚಂಡಾಲನು ನಗುತ್ತ
ದೂರಹೋಗ ಬೇಕಾದುದು ಯಾವುದು? ಈ ಮಣ್ಣಿನ ದೇಹವೇ, ಅಥವಾ ಎಲ್ಲರಲ್ಲಿಯೂ ಇರುವ ಆತ್ಮವೇ?
ಕಾಷಾಯವಸ್ತ್ರ ಧರಿಸಿದ್ದೀರಿ, ಅದ್ವೈತ ತತ್ತ್ವ ಸಾರುತ್ತಿದ್ದೀರಿ, ನಿಮಗೆ ಇರುವ ಶರೀರವೇ ನನಗೂ ಇದೆ. ನಿಮ್ಮ ಮತ್ತು ನನ್ನ ಆತ್ಮವೂ ಒಂದೇ. ಹಾಗಿರುವಾಗ ದೂರ ಹೋಗು ಎಂದು ಯಾರಿಗೆ ತಾನೇ ಹೇಳುವಿರಿ?
ಜ್ಞಾನಕ್ಕೆ ಜಾತಿಯಿಲ್ಲ
ತಮಗೆ ನಿಜಜ್ಞಾನದ ಅರಿವು ಉಂಟುಮಾಡಲು ಭಗವಾನ್ ಶಂಕರನೇ ಈ ಚಂಡಾಲ ರೂಪದಲ್ಲಿ ಬಂದಿದ್ದಾನೆ ಎಂದು ಶಂಕರಾಚಾರ್ಯರಿಗೆ ಅರಿವಾಯಿತು. ಅವರು ಆ ಚಂಡಾಲನಿಗೆ ಕೈಮುಗಿದು
ಅಯ್ಯಾ, ಜ್ಞಾನಕ್ಕೆ ಜಾತಿಯುಂಟೇ ? ಯಾರು ತಾನು ಶರೀರವಲ್ಲ, ಎಲ್ಲವನ್ನೂ ವ್ಯಾಪಿಸಿರುವ ಪರಮ ತತ್ತ್ವವೇ ನಾನು ಎಂಬ ಜ್ಞಾನಹೊಂದಿ, ಆ ಚೈತನ್ಯ ಪ್ರಕಾಶವನ್ನೇ ಸದಾ ಚಿಂತಿಸುತ್ತ, ಆನಂದದಿಂದ ಇರುತ್ತಾನೋ, ಅವನು ಚಂಡಾಲನಾದರೇನು, ಬ್ರಾಹ್ಮಣನಾದರೇನು ? ಇಂತಹ ಅರಿವನ್ನು ನನಗೆ ನೀನು ಉಂಟುಮಾಡಿದೆ. ನೀನೇ ನನ್ನ ಗುರು. ನಿನಗೆ ಪ್ರಣಾಮಗಳು.
ಚಿತ್ರ : ರಾಮಗೌತಮ